ಅ) ಮತ್ತು ಇ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55ಕ್ಕೆ ಇಳಿಸುವ ಬಗ್ಗೆ ಈ ಹಿಂದೆ ಸದನದಲ್ಲಿ ಪ್ರಸ್ತಾಪಿಸಲಾಗಿತ್ತು. ಈ ಬಗ್ಗೆ 31-3-91ರ ನಂತರವೇ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ.

ರಾಜ್ಯ ಸರ್ಕಾರದ ಭ್ರಷ್ಟಾಚಾರಗಳ ಬಗ್ಗೆ.

601 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಲ್ಲಿರುವ ಭ್ರಷ್ಟಾಚಾರಗಳನ್ನು ತಡೆಗಟ್ಟಲು ಸರ್ಕಾರದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಪ್ರಕಾರ ಲೋಕಾಯುಕ್ತ ಮತ್ತು ಉಪಲೋಕಾಯುಕ್ತ ಸಂಸ್ಥೆಗಳನ್ನು ರಾಜ್ಯದ ಉಡಳಿತದಲ್ಲಿ ಲಂಚಗುಳಿತನ ಮತ್ತು ಭ್ರಷ್ಟಾಚಾರಗಳನ್ನು ನಿಯಂತ್ರಿಸಲು ಮತ್ತು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ವಿಧಾನ ಮಂಡಲಗಳ ವಿಧೇಯಕದ ಮೂಲಕ ಸೃಷ್ಟಿಸಲಾಗಿದೆ.

ಕರ್ನಾಟಕ ವಿಧಾನಸೌಧ ನೌಕರ ಸಚಿವಾಲಯದ ಸತ್ಕಾರ ಸಮಾರಂಭದ ಬಗ್ಗೆ

629 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಪ್ರತಿ ವರ್ಷ ಗಣರಾಜ್ಯ ದಿನಾಚರಣೆಯ ಪ್ರಯುಕ್ತ ಸಚಿವಾಲಯದ ನೌಕರರಿಗೆ ಹಾಗೂ ಅವರ ಹೆಂಡತಿ ಮಕ್ಕಳಿಗೆ ಕಾಫಿ ತಿಂಡಿಯೊಂದಿಗೆ ಸತ್ಕರಿಸುವುದು ನಿಜವೇ?

ಆ) ಹಾಗಿದ್ದಲ್ಲಿ, ಅದರ ಉದ್ದೇಶವೇನು?

ಇ) ಈ ಸತ್ಕಾರ ಕೂಟದಲ್ಲಿ ಎಷ್ಟು ಜನ ಭಾಗವಹಿಸುತ್ತಾರೆ ಹಾಗೂ ಇದಕ್ಕೆ ತಗಲುವ ವೆಚ್ಚವೆಷ್ಟು ಮತ್ತು ಈ ವೆಚ್ಚಕ್ಕೆ ಸಮರ್ಥನೆ ಯಾವುದು?

ಈ) ಈ ಸತ್ಕಾರ ಸಮಾರಂಭಕ್ಕೆ ಮಿತವ್ಯಯದ ಆದೇಶ ಅನ್ವಯಿಸುವುದಿಲ್ಲವೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು. ಪತಿ ಪತ್ನಿಯರನ್ನು ಮಾತ್ರ ಈ ಸಂತೋಷಕೂಟಕ್ಕೆ ಆಹ್ವಾನಿಸಲಾಗಿದೆ.

ಆ) ಸರ್ಕಾರ ನೌಕರರೊಳಗೆ ಸೌಹಾರ್ದತೆಯನ್ನು ಮತ್ತು ಒಳ್ಳೆಯ ಬಾಂಧವ್ಯವನ್ನು ವೃದ್ಧಿಸುವ ದೃಷ್ಟಿಯಿಂದ.

ಇ) ಇದರಲ್ಲಿ ಸುಮಾರು 3000 ಜನರು ಭಾಗವಹಿಸುತ್ತಾರೆ. ಇದಕ್ಕೆ ತಗಲುವ ವೆಚ್ಚ ರೂ. 37,800-00. ಸಮರ್ಥನೆಯನ್ನು (ಅ)ದಲ್ಲಿ ತಿಳಿಸಲಾಗಿದೆ.

ಈ) ಇಲ್ಲ.

ಸಿಲ್ಕ್ ಫಿಲೇಚರ್‌ಗಳ ಬಗ್ಗೆ

611 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಿಲ್ಕ್ ಫಿಲೇಚರ್ ಕೇಂದ್ರಗಳೆಷ್ಟು?

ಆ) ಇವುಗಳ ಅಭಿವೃದ್ಧಿ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಅನೇಕ ಸಿಲ್ಕ್ ಫಿಲೇಚರ್‌ಗಳು ನಷ್ಟ ಅನುಭವಿಸುತ್ತಿರಲು ಕಾರಣವೇನು?

ಈ) ಈ ನಷ್ಟ ತಪ್ಪಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳು ಯಾವುವು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):

ಅ) ನಾಲ್ಕು

ಆ) 1. ಅತ್ಯುತ್ತಮ ಕಾರ್ಮಿಕರನ್ನು ಗುರುತಿಸಿ ಉತ್ತೇಜಕ ಕಾರ್ಯಕ್ಕೆ ಬಹುಮಾನವನ್ನು ನೀಡುವುದು.

2. ಸುಧಾರಿತ ಮಲ್ಬಿ ಎಂಡ್ ಮಿಷನ್‌ನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

3. ಉತ್ಪಾದಿಸಿದ ರೇಷ್ಮೆಯ ಮೌಲ್ಯದಲ್ಲಿ ರೇಷ್ಮೆ ಗೂಡಿನ ಮೌಲ್ಯದ ವಸೂಲಾತಿ.

4. ರೇಷ್ಮೆ ಉತ್ಪಾದನೆಯನ್ನು ಹೆಚ್ಚಿಸಿ ಮೇಲಾಡಳಿತ ವೆಚ್ಚವನ್ನು ಕಡಿಮೆ ಮಾಡುವುದು.

5. ಹೆಚ್ಚಿನ ಬೈವೋಲ್‌ಟಿನ್ ಗೂಡುಗಳನ್ನು ಬಿತ್ತನೆ ವಲಯದಲ್ಲಿ ಖರೀದಿಸುವುದು.

ಇ) 1. ರೇಷ್ಮೆ ನೂಲಿನ ಗುಣಮಟ್ಟ ಹಾಗೂ ಉತ್ಪನ್ನಕ್ಕೆ ಧಕ್ಕೆಯಾಗಿರುವ ಬಹಳ ಹಳೆಯ ಯಂತ್ರೋಪಕರಣಗಳು (1937ನೇ ಇಸವಿ)

2. ಟ್ರೂಸ್ ಅಗ್ರಿಮೆಂಟ್ ಒಪ್ಪಂದದಂತೆ ನೌಕರರಿಗೆ ಕಾನೂನು ರೀತ್ಯಾ ನೀಡಲಾಗುತ್ತಿರುವ ಹೆಚ್ಚಿನ ಸಂಬಳ ಮತ್ತು ಭತ್ಯಗಳು.

3. ಪ್ರಾವಿಡೆಂಟ್ ಫಂಡ್, ಗ್ರಾಚುಯಿಟಿ, ಇಎಸ್‌ಐ ಮುಂತಾದವುಗಳನ್ನು ಕೆಲಸಗಾರರಿಗೆ ನೀಡುತ್ತಿರುವುದು.

4. ವಿದ್ಯುತ್ ಸರಬರಾಜಿನಲ್ಲಾಗುವ ಅಡಚಣಿ.

5. ಕಚ್ಚಾ ರೇಷ್ಮೆ ಬೆಳೆಗೆ ಹೋಲಿಸಿದಾಗ ಗೂಡಿನ ಬೆಲೆ ಮತ್ತು ಅದನ್ನು ಕಚ್ಚಾ ರೇಷ್ಮೆ ಪರಿವರ್ತಿಸುವ ಬೆಲೆ ಹೆಚ್ಚಾಗಿರುವುದರಿಂದ.

ಈ) 1. ಸುಧಾರಿತ ಕ್ರಮಗಳನ್ನು ಅನುಸರಿಸಿ ಪ್ರತಿ ಯುನಿಟ್ ಕ್ಷೇತ್ರದಲ್ಲಿ ಗಮನಾರ್ಹ ಹಚ್ಚುವರಿ ನೂಲನ್ನು ಉತ್ಪಾದಿಸುವುದು.

2. ಉತ್ತಮ ಕೆಲಸಗಾರರಿಗೆ ಬಹುಮಾನಗಳನ್ನು ಘೋಷಿಸುವುದು ಹಾಗೂ ಪ್ರೋತ್ಸಾಹ ಧನವನ್ನು ನೀಡುವುದು.

3. ಸ್ವಯಿಚ್ಛಾ ನಿವೃತ್ತಿಗೆ ಪ್ರೋತ್ಸಾಹ ನೀಡುವುದು.

4. ಪ್ರತಿ ಬೇಸನ್ನಿನ ಉತ್ಪಾದನೆಯನ್ನು ಹೆಚ್ಚಿಸುವುದು.

5. ಫಿಲೇಚರ್‌ಗಳಲ್ಲಿ ದೊರೆಯುವ ನೀರಿನ ಗುಣಮಟ್ಟವನ್ನು ಹೆಚ್ಚಿಸುವುದು.

6. ರೆಂಡಿಟ್ಟಾವನ್ನು ಕಡಿಮೆ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತಿರುವುದು.

7. ವಿದ್ಯುತ್ತಿನ ಸರಬಾರಾಜಿನಲ್ಲಿ ಅಡಚಣಿ ಉಂಟಾದಾಗ ಡೀಸಲ್ ಜನರೇಟರ್ ಸೆಟ್ಟನ್ನು ಉಪಯೋಗಿಸಿ ರೇಷ್ಮೆ ಉತ್ಪಾದಿಸುತ್ತಿರುವುದು.

8. ರೇಷ್ಮೆ ನೂಲಿನ ಉತ್ಪಾದನೆಯನ್ನು ಹೆಚ್ಚಿಸಿ ಇದರ ಬಾಬಿನ ವೆಚ್ಚ ಕಡಿಮೆ ಮಾಡುವುದು.

9. ಮಾರುಕಟ್ಟೆಯ ಬೆಲೆಯನ್ನು ಪರಿಶೀಲಿಸಿ ಸೂಕ್ತವಾದ ಸಮಯದಲ್ಲಿ ರೇಷ್ಮೆಯನ್ನು ಮಾರಾಟ ಮಾಡುವುದು.

ರೇಷ್ಮೆ ಬಿತ್ತನೆ ಗೂಡು ಬೆಳೆಯ ಬಗ್ಗೆ

612 - ಶ್ರೀ ಮಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವಿರೆ?

ಅ) ಕರ್ನಾಟಕದಲ್ಲಿ ರೇಷ್ಮೆ ಬಿತ್ತನೆ ಗೂಡನ್ನು ಬೆಳೆಯುವ ಪ್ರದೇಶಗಳಾವುವು?